# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ 07 ಬ್ಯಾಟರಾಯನಪುರ ವಾರ್ಡ್ ಸಮಿತಿ ಸಭೆಯ ನಡವಳಿ.

**ದಿನಾಂಕ 05.06.2021 ರಂದು ವಾರ್ಡ್ ಕಛೇರಿಯಲ್ಲಿ ಬೆಳ್ಳಿಗೆ 11.30 ಕ್ಕೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಝೂಮ್ ಅಪ್ ಮೂಲಕ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

ವಾರ್ಡ್ ನಂ.07, ಬ್ಯಾಟರಾಯನಪುರ ವಾರ್ಡ್‌ಗೆ ಮಾನ್ಯ ಆಯುಕ್ತರ ಆದೇಶದಂತೆ ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗಿರುವ ಶ್ರೀ.ಪ್ರಕಾಶ್.ಜಿ ರವರು ಸಭೆಯಲ್ಲಿ ಹಾಜರಿದ್ದು, ಈ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಗಮನ ಹರಿಸಿ, ಕೈಗೊಂಡ ಕ್ರಮದ ಬಗ್ಗೆ ಚರ್ಚಿಸಲಾಯಿತು.

**1. ಘನತ್ಯಾಜ್ಯ ನಿರ್ವಹಣೆ:**

1. ಮೀಸೆ ಹನುಮಂತಪ್ಪ ಬಡಾವಣೆಗೆ ಹೋಗುವ ರಸ್ತೆಯ ಬದಿಯಲ್ಲಿರುವ ಕಸದ ರಾಶಿಯನ್ನು 2 ದಿನಗಳೊಳಾಗಿ ತೆರವು ಮಾಡುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ. ಅದರಂತೆ ಕಸದ ರಾಶಿಯನ್ನು ತೆರವು ಮಾಡಿರುವ ಭಾವಚಿತ್ರವನ್ನು ವಾರ್ಡ್ ಸಮಿತಿ ವಾಟ್ಸಾಪ್ ಗುಂಪಿಗೆ ಅಪ್‌ಲೋಡ್ ಮಾಡಬೇಕೆಂದು ಸೂಚಿಸಿಲಾಗಿರುತ್ತದೆ.
2. ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಟ್ರಾಕ್ಟರ್ ವಾಹನವನ್ನು ದುರಸ್ತಿಗೊಳಿಸಿರುವುದಿಲ್ಲ. ಇದರ ಬಗ್ಗೆ ಹಲವಾರು ಬಾರಿ ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದ್ದರು ಸಹ ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಗುತ್ತಿಗೆದಾರರು ಕ್ರಮ ವಹಿಸದೆ ಇರುವುದು ಕಂಡುಬಂದಿರುತ್ತದೆ. ಅದರಿಂದ ಪಾಲಿಕೆ ವಾಹನವನ್ನು ಸರ್ಮಪಕವಾಗಿ ನಿಯೋಜಿಸಿಕೊಳ್ಳದೇ ಇರುವುದು ಕಂಡುಬಂದಿದ್ದು ಮುಂದಿನ ಮಾಸಿಕ ಸಭೆ ವೇಳೆಗೆ ವಾಹನವನ್ನು ದುರಸ್ತಿ ಮಾಡಿಸಿಕೊಂಡು ಘನತ್ಯಾಜ್ಯ ನಿರ್ವಹಣೆ ಕೆಲಸಗಳಿಗೆ ನಿಯೋಜಿಸಿಕೊಳ್ಳಬೇಕೆಂದು ಸೂಚಿಸಲಾಗಿರುತ್ತದೆ.
3. ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಎಲ್ಲಾ ಸಿಬ್ಬಂದಿಗಳಿಗೆ ಎನ್-95 ಮಾಸ್ಕ್, ಸ್ಯಾನಿಟೈಸರ್ ಹಾಗೂ ಗ್ಲೌಸ್‌ಗಳನ್ನು ನೀಡಿರುವ ಬಗ್ಗೆ ಭಾವಚಿತ್ರವನ್ನು ವಾರ್ಡ್ ಸಮಿತಿ ವಾಟ್ಸಾಪ್ ಗುಂಪಿಗೆ ಅಪ್‌ಲೋಡ್ ಮಾಡಬೇಕೆಂದು ಸೂಚಿಸಿಲಾಗಿರುತ್ತದೆ.

**2. ಆರೋಗ್ಯ ಇಲಾಖೆ:**

1. ಕೋವಿಡ್ ನಿಂಯತ್ರಣದ ಬಗ್ಗೆ ಕ್ರಮವಹಿಸಬೇಕಾಗಿದ್ದು, ಕೋವಿಡ್ ಸೋಂಕಿತರ ಪ್ರಥಮ/ದ್ವಿತೀಯ ಸಂಪರ್ಕದವರ ಮಾಹಿತಿಯನ್ನು ಕಳೆ ಆಕುವುದು ಮುಖ್ಯವಾದ ಕೆಲಸವಾಗಿರುತ್ತದೆ ಎಂದು ತಿಳಿಸಿದರು.
2. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಸೂಚನೆಯಂತೆ Ward Decentralised Triage and Emergency Response (DETER) Committee for Covid-19 Management(WDC) ಅನ್ನು ಸ್ಥಾಪಿಸಲಾಗಿದ್ದು, ಈ ಸಮಿತಿಯಲ್ಲಿನ

Volunters/NGO's/RWA's/Medical Assistants ಗಳ ಮಾಹಿತಿಯ ಪಟ್ಟಿಯನ್ನು ಲಗತ್ತಿಸಿದೆ.

3. ವಾರ್ಡ್ ನಂ.07ಕ್ಕೆ ಸಂಬಂಧಿಸಿದಂತೆ ಟ್ರೈಯಾಜ್ ಸೆಂಟರ್‌ಅನ್ನು University of Agricultural Sciences, GKVK ರಲ್ಲಿ ಸ್ಥಾಪಿಸಲಾಗಿರುವ ಕೋವಿಡ್ ಕೇರ್ ಸೆಂಟರ್ ಆವರಣದಲ್ಲೆ ಟ್ರೈಯಾಜ್ ಸೆಂಟರ್‌ಅನ್ನು ಸ್ಥಾಪಿಸಲಾಗಿರುತ್ತದೆ. ಇದಕ್ಕೆ ಉಸ್ತುವಾರಿಗಳಾಗಿ ಡಾ.ವೆಂಕಟೇಶ್.ಕೆ.ಆರ್ (9739392519) ಮತ್ತು ಡಾ.ಅಮಿತ್.ಹೆಚ್.ಎಸ್(7204367136) ನಿಯೋಜಿಸಲಾಗಿರುತ್ತದೆ.
4. ವಾರ್ಡ್ ಸಮಿತಿಯಲ್ಲಿ ವಾರ್ಡ್ ವಾಸವಿರುವ ವಿವಿಧ ವಿಭಾಗದಲ್ಲಿನ ವೈಧ್ಯಾರನ್ನು ಗುರುತಿಸಲಾಗಿದ್ದು, ಯಾವುದೇ ಸಮಯದಲ್ಲಿ ತಮ್ಮಿಂದ ಮಾಡಬಹುದಾದ ವೈಧ್ಯಾಕಿಯ ಸಲಹೆಗಳನ್ನು ನೀಡಲು ಒಪ್ಪಿರುತ್ತಾರೆ.
5. ವಾರ್ಡ್ ವ್ಯಾಪ್ತಿಯಲ್ಲಿನ ಸಿಂಧಿ ಕಾಲೇಜ್ ಅಡಿಟೋರಿಯಂ ಆವರಣಲ್ಲಿ ಕೋವಿಡ್ ಸೋಂಕಿತರಿಗೆ ನೆರವು ನೀಡಲು ಆಮ್ಲಜನಕ ಸಹಿತ ಬೆಡ್‌ಗಳ ವ್ಯವಸ್ಥೆಯನ್ನು ಮಾಡಿರುತ್ತಾರೆ.

Mamatha.N.D.
ಕಾರ್ಯದರ್ಶಿ 5/6/2021
ವಾರ್ಡ್ 07